ದಿನಾಂಕಃ **22.04.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಎಸ್.ಆರ್. ವಕೀಲರಿಂದಃ</u>

ದಾವಾ 1 ನೇ ಆಸ್ತಿಯ ಸರ್ವೆ.ನಂಬರ್ ಜಮೀನಿನಲ್ಲಿ ಸುಬ್ಬಾರೆಡ್ಡಿಯ ವಾರಸುದಾರರು ಜಮೀನನ್ನು ಮಾರಾಟ ಮಾಡಿರುತ್ತಾರೆ. ದಿಃ27.05.1976 ರ ನಂತರ ದಾವಾ ಸರ್ವೆ.ನಂಬರ್.13/1 ರಲ್ಲಿ ಜಮೀನನ್ನು ಮಾರಾಟ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಸರ್ವೆ.ನಂಬರ್.13/1 ರಲ್ಲಿ ಸುಬ್ಬಾರೆಡ್ಡಿಯ ವಾರಸುದಾರರು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ 1 ನೇ ಆಸ್ತಿಯ ವಿಸ್ತೀರ್ಣ ಮತ್ತು ದಾಖಲೆಯಲ್ಲಿನ ವಿಸ್ತೀರ್ಣದಲ್ಲಿನ ವ್ಯತ್ಯಾಸದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

2. ದಾವಾ ಸ್ವತ್ತುಗಳು ಎರಡು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ದಾವಾ 2 ನೇ ಸ್ವತ್ತಿಗೆ ಸಂಬಂಧಿಸಿದಂತೆ ನಾವು ಹಾಜರುಪಡಿಸಿರುವ ಕ್ರಯಪತ್ರದಲ್ಲಿ ನಮೂದು ಮಾಡಿರುವ ವಿಸ್ತೀರ್ಣ ಮತ್ತು ವಾದ ಪತ್ರದಲ್ಲಿ ನಮೂದು ಮಾಡಿರುವ ದಾವಾ 2 ನೇ ಸ್ವತ್ತಿನ ವಿಸ್ತೀರ್ಣ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ದಾಖಲೆ ಹಾಜರುಪಡಿಸುವಾಗ ವ್ಯತ್ಯಾಸ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ದಾವಾ 2 ನೇ ಸ್ವತ್ತನ್ನು ಖರೀದಿ ಮಾಡಿರುವ ಕ್ರಯಪತ್ರದಲ್ಲಿ ತಪ್ಪನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಕ್ರಯಪತ್ರದಲ್ಲಿ ಯಾವುದೇ ತಪ್ಪು ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ 2 ನೇ ಸ್ವತ್ತಿನ ದಕ್ಷಿಣಕ್ಕೆ ದಾವಾ 1 ನೇ ಸ್ವತ್ತು ಇರುತ್ತದೆ. ದಾವಾ 1 ನೇ ಸ್ವತ್ತಿನ ಉತ್ತರಕ್ಕೆ ದಾವಾ 2 ನೇ ಸ್ವತ್ತು ಇರುತ್ತದೆ.

3. ವಾದ ಪತ್ರದಲ್ಲಿ ನಮೂದು ಮಾಡಿರುವ ದಾವಾ ಸ್ವತ್ತುಗಳ ಚೆಕ್ಕುಬಂದಿ ಸರಿಯಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಕ್ರಯಪತ್ರದಲ್ಲಿ ಸರ್ವೆನಂಬರ್ ಗಳನ್ನು ತಪ್ಪಾಗಿ ನಮೂದು ಮಾಡಿಕೊಂಡು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲ್ ಆಗಿ ಚೆಕ್ಕುಬಂದಿ ಹೊಂದಾಣಿಕೆಯಾಗದೆ ಇದ್ದರು ಸಹ ದಾವಾ ಸ್ವತ್ತಿನ ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಸಿಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿಸಿಕೊಂಡಿರುವಂತಹ ಕಂದಾಯ ದಾಖಲೆಗಳ ಆಧಾರದ ಮೇರೆಗೆ ನಾವು ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆದರೆ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ.

4. ಇಂದಿಗೂ ಪ್ರತಿವಾದಿಗಳು ದಾವಾ ಸ್ವತ್ತುಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳು ಪ್ರತಿವಾದಿಗಳು ಸ್ವಾಧೀನಕ್ಕೆ ಬರುವ ಪೂರ್ವದಲ್ಲಿ ಪ್ರತಿವಾದಿಗಳ ತಾಯಿ ನರಸಮ್ಮ ದಾವಾ ಸ್ವತ್ತುಗಳ ಸ್ವಾಧೀನದಲ್ಲಿ ಇದ್ದರು ಎಂದು ಸೂಚಿಸುವುದು ಸರಿಯಲ್ಲ. ಅದಕ್ಕಿಂತ ಪೂರ್ವದಲ್ಲಿ ದಾವಾ ಸ್ವತ್ತುಗಳು ನರಸಮ್ಮನವರ ತಂದೆ ದೊಡ್ಡಹನುಮಂತರೆಡ್ಡಿರವರ ಸ್ವಾಧೀನದಲ್ಲಿ ಇದ್ದವು ಎಂದು ಸೂಚಿಸುವುದು ಸರಿಯಲ್ಲ.

5. ಕ್ರಯಪತ್ರದಲ್ಲಿ ಸರ್ವೆನಂಬರ್ ತಪ್ಪಾಗಿ ನಮೂದಾಗಿರುವುದನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತುಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳಿಗೆ

ಸಂಬಂಧಿಸಿದಂತೆ ನಾವು ಸತತವಾಗಿ ಕಂದಾಯ ಪಾವತಿ ಮಾಡಿರುತ್ತೇವೆ. ಕಂದಾಯ ಮಾಡಿರುವ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

6. ಪ್ರತಿವಾದಿಗಳಿಗೆ ಸೇರಿದ ದಾವಾ ಸ್ವತ್ತುಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ